ದಿಃ 17.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಶ್ರೀ ಎಂ.ಎಂ.ಆರ್, ವಕೀಲರಿಂದ 3 ನೇ ಪ್ರತಿವಾದಿ ಪರವಾಗಿ**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ನಿ.ಡಿ.12 ರಲ್ಲಿ ಇರುವ ಸಹಿ ನನ್ನದೇ ಇರುತ್ತದೆ, ಸದರಿ ಸಹಿಯನ್ನು ನಾನು 1998 ರಲ್ಲಿ ನಾನು ನ್ಯಾಯಾಲಯದಲ್ಲಿ ನಿ.ಡಿ.12 ದಾಖಲೆಗೆ ಸಹಿ ಮಾಡಿರುತ್ತೇನೆ. ಸೋಮಯ್ಯ ಎನ್ನುವವರು ಅವರಿಗೆ ಸೇರಿದ ಜಿ. ಹೊಸಳ್ಳಿ ಗ್ರಾಮದ ಸರ್ವೆ ನಂಬರ್ 134 ರಲ್ಲಿ 2 ಎಕರೆ 14 ಗುಂಟೆ ಜಮೀನನ್ನು ನನ್ನ ಹೆಸರಿಗೆ ಪಹಣಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ನಿ.ಡಿ.13 ದಾಖಲೆಯಲ್ಲಿ ಇರುವ ಸಹಿ ನನ್ನದೇ ಇರುತ್ತದೆ.

**ಪಾಟೀ ಸವಾಲು ಶ್ರೀ ಬಿ.ಡಿ.ಎಲ್.ಜಿ., ವಕೀಲರಿಂದ ವಾದಿ ಪರವಾಗಿ**

3. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಪಾಟೀ ಸವಾಲಿಗೆ ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 24.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**<u>ಪಾಟೀ ಸವಾಲು ಶ್ರೀ ಬಿ.ಡಿ.ಎಲ್.ಜಿ., ವಕೀಲರಿಂದ ವಾದಿ ಪರವಾಗಿ</u>**

4. 1, 3 ಮತ್ತು 4 ನೇ ವಾದಿಗಳು ಪರಿಚಯ ಇರುತ್ತಾರೆ, ಉಳಿದ ವಾದಿಗಳು ನನಗೆ ಪರಿಚಯ ಇರುವುದಿಲ್ಲ. 3 ನೇ ಪ್ರತಿವಾದಿಯು ನನಗೆ ಪರಿಚಯ ಇರುತ್ತಾರೆ, ಉಳಿದ ಪ್ರತಿವಾದಿಗಳು ನನಗೆ ಪರಿಚಯ ಇರುವುದಿಲ್ಲ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನಗೆ 3 ನೇ ಪ್ರತಿವಾದಿಯೇ ತಿಳಿಸಿರುತ್ತಾರೆ. ಈ ದಾವೆಯನ್ನು ವಾದಿಗಳು ವಿಭಾಗ ಕೋರಿ ಸಲ್ಲಿಸಿರುತ್ತಾರೆ. ಈ ದಾವೆಯಲ್ಲಿ ಇರುವ ಆಸ್ತಿಗಳ ವಿವರ ನನಗೆ ಗೊತ್ತಿರುತ್ತದೆ. ಜಿ. ಹೊಸಹಳ್ಳಿ ಗ್ರಾಮದ ಸರ್ವೆ ನಂಬರ್ 134 ರಲ್ಲಿ 10 ಎಕರೆ ಆಸ್ತಿಗೆ ವಾದಿಯು ದಾವೆಯನ್ನು ಸಲ್ಲಿಸಿರುತ್ತಾರೆ, ಇನ್ನೊಂದು ಸರ್ವೆ ನಂಬರ್ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 134 ರಲ್ಲಿ ಇರುವ 10 ಎಕರೆ ಆಸ್ತಿಯನ್ನು ಈ ದಾವೆಯಲ್ಲಿ ನಮೂದು ಮಾಡಿರುತ್ತಾರೆ. ಸರ್ವೆ ನಂಬರ್ 134 ರಲ್ಲಿ 10 ಎಕರೆ ಜಮೀನು ಸೊಮಯ್ಯ ರವರಿಗೆ ಮಂಜೂರಾಗಿ ಬಂದಿರುತ್ತದೆ. ಸರ್ವೆ ನಂಬರ್ 134 ಆಸ್ತಿಯು ನನಗೆ ಸೇರಿದ ಆಸ್ತಿ ಆಗಿರುತ್ತದೆ. ಸರ್ವೆ ನಂಬರ್ 134 ರಲ್ಲಿ ಇರುವ 10 ಎಕರೆ ಆಸ್ತಿಯು ನನಗೆ ಅಧಿಕಾರ ಪತ್ರ ಮತ್ತು ಕರಾರು ಪತ್ರ ಮೂಲಕ ಕೆಂಚಮ್ಮ ಮತ್ತು ಅವರ ಮಕ್ಕಳಿಂದ ಬಂದಿರುತ್ತದೆ. ನಾನು ಸದರಿ ಸರ್ವೆ ನಂಬರ್ 134 ರಲ್ಲಿ 10 ಎಕರೆ ಜಮೀನನ್ನು ಖರೀದಿ ಮಾಡುವಾಗ ಆಸ್ತಿಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಖರೀದಿ ಮಾಡಿರುತ್ತೇನೆ. ಸರ್ವೆ ನಂಬರ್ 134 ರಲ್ಲಿ 10 ಎಕರೆ ಜಮೀನನ್ನು ನಾನು ಖರೀದಿ ಮಾಡುವ ಸಮಯದಲ್ಲಿ ಸೋಮಯ್ಯ ರವರು ಮಾತ್ರ ಕ್ರಯ ಪತ್ರಕ್ಕೆ ಸಹಿ ಮಾಡಿರುತ್ತಾರೆ. ವಾದಿಯು ಕ್ರಯ ಪತ್ರಕ್ಕೆ ಸಹಿ ಮಾಡಿರುವುದಿಲ್ಲ. O.S.152/1998 ದಾವೆಯಲ್ಲಿ ಕೆಂಚಮ್ಮ ರವರು ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕನ್ನಡ ಇಂಗ್ಲೀಷ್

ಓದಲು ಬರುತ್ತದೆ. ನಿ.ಡಿ.11 ದಾಖಲಾತಿಯಲ್ಲಿ ಕೆಂಚಮ್ಮ ರವರು ಪಕ್ಷಗಾರರಾಗಿರುವುದಿಲ್ಲ. ನಿ.ಡಿ.11 ರಲ್ಲಿ ಸೋಮಯ್ಯ ಬಿನ್ ಜೋಗಿ ದೇವಯ್ಯ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿ.ಡಿ.4 ದಾಖಲಾತಿಯಲ್ಲಿ ಸೋಮಯ್ಯ ಬಿನ್ ಜೋಗಿ ದೇವಯ್ಯ ಎಂದು ನಮೂದು ಇರುತ್ತದೆ ಎಂದರೆ ಸರಿ. ನಾನು ದಾವೆ ಹಾಕಿರುವ ವ್ಯಕ್ತಿ ಬೇರೆ ಮತ್ತು ನಿ.ಡಿ.4 ರಲ್ಲಿ ಇರುವ ವ್ಯಕ್ತಿ ಬೇರೆ ಎಂದರೆ ಸರಿಯಲ್ಲ. ಸೋಮಯ್ಯ ರವರಿಗೆ ಬೇರೆ ಹೆಸರು ಇದ್ದ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ. ಸೋಮಯ್ಯ ಬಿನ್ ಕರಿಯಪ್ಪ ಬೇರೆ ಮತ್ತು ಸೋಮಯ್ಯ ಬಿನ್ ದ್ಯಾವಯ್ಯ ಬೇರೆ ಎಂದರೆ ಸರಿಯಲ್ಲ. ಸೋಮಯ್ಯ ಬಿನ್ ಜೋಗಿ ದೇವಯ್ಯ ಬೇರೆಯೇ ವ್ಯಕ್ತಿ ಎಂದರೆ ಸರಿಯಲ್ಲ. ಸೋಮಯ್ಯ ಬಿನ್ ಕರಿಯಪ್ಪ, ಸೋಮಯ್ಯ ಬಿನ್ ದ್ಯಾವಯ್ಯ, ಸೋಮಯ್ಯ ಬಿನ್ ಜೋಗಿ ದೇವಯ್ಯ ಎನ್ನುವ 3 ಹೆಸರುಗಳು ಸೋಮಯ್ಯ ರವರಿಗೆ ಇತ್ತು ಎನ್ನುವ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳಿಗೆ ಸುಮಾರು 10 ವರ್ಷಗಳಿಂದ ವ್ಯಾಜ್ಯ ಇರುವ ಬಗ್ಗೆ ನನಗೆ ಗೊತ್ತಿರುತ್ತದೆ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ಒಟ್ಟು 4 ಕಡೆ ಆಸ್ತಿ ಇರುತ್ತದೆ. ನನಗೆ ಮಾರಾಟ ಮಾಡಿರುವ ಆಸ್ತಿಯ ಸರ್ವೆ ನಂಬರ್ ಮಾತ್ರ ನನಗೆ ಗೊತ್ತಿರುತ್ತದೆ. ಉಳಿದ 3 ಆಸ್ತಿಗಳ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 1970 ರಿಂದ 2019 ರವರೆಗೆ ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ಆಸ್ತಿಯ ಬಗ್ಗೆ ಏನೆಲ್ಲ ದಾಖಲಾತಿ ಆಗಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

5. O.S.152/1998 ರಲ್ಲಿ ಹಾಜರು ಮಾಡಿರುವ ಕಂದಾಯ ದಾಖಲಾತಿ ಮತ್ತು ವಂಶವೃಕ್ಷವನ್ನು ಈ ದಾವೆಯಲ್ಲಿ ಹಾಜರು ಮಾಡಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವೀಲು

ನಾಮೆ ಬಗ್ಗೆ ನನಗೆ ಗೊತ್ತಿರುತ್ತದೆ. ಸೋಮಯ್ಯ ಬಿನ್ ಕರಿಯಪ್ಪ ರವರು 3 ನೇ ಪ್ರತಿವಾದಿಗೆ ವೀಲು ನಾಮೆ ಮಾಡಿಕೊಟ್ಟಿರುತ್ತಾರೆ. ಸದರಿ ಆಸ್ತಿಯು ವೀಲು ನಾಮೆ ಮಾಡುವ ಸಮಯದಲ್ಲಿ ಸೋಮಯ್ಯ ಬಿನ್ ಕರಿಯಪ್ಪ ರವರ ಹೆಸರಿನಲ್ಲಿ ಇತ್ತು. ಸದರಿ ವೀಲು ನಾಮೆ ಮಾಡಿರುವ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ಹೆಸರಿಗೆ ವೀಲು ನಾಮೆ ಮಾಡಿರುವ ಆಸ್ತಿಯು ಎಷ್ಟು ವಿಸ್ತೀರ್ಣ ಇತ್ತು ಎಂದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯು ಊರಿನಲ್ಲಿ ಹೇಳಿದ ಕಾರಣ ವೀಲು ನಾಮೆಯ ವಿಚಾರ ನನಗೆ ಗೊತ್ತಾಗಿರುತ್ತದೆ. ಸದರಿ ವೀಲು ನಾಮೆಗೆ ಸಹಿ ಹಾಕಿರುತ್ತಾರೋ ಹೆಬ್ಬೆಟ್ಟು ಹಾಕಿರುತ್ತಾರೋ ಎಂದು ನನಗೆ ಗೊತ್ತಿಲ್ಲ. ಸದರಿ ವೀಲು ನಾಮೆಯು ನೊಂದಾವಣಿಯಾಗಿರುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. 2017 ರಲ್ಲಿ ವಾದಿ ಮತ್ತು 3 ನೇ ಪ್ರತಿವಾದಿಯ ನಡುವೆ ಏನು ದಾಖಲಾತಿಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಕರಾರು ಪತ್ರ ಆಗಿರುವ ವಿಚಾರ ಗೊತ್ತು ಬೇರೆ ಯಾವುದೇ ವಿಚಾರ ಗೊತ್ತಿರುವುದಿಲ್ಲ. 3 ನೇ ಪ್ರತಿವಾದಿಯು ಕರಾರು ಪತ್ರ ಆಗಿದೆ ಎಂದು ಹೇಳಿದ ಮೇರೆಗೆ ಗೊತ್ತಾಗಿರುತ್ತದೆ ಆದರೆ ಸದರಿ ದಾಖಲಾತಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. 3 ನೇ ಪ್ರತಿವಾದಿಯ ಹೇಳಿಕೆಯ ಮೇರೆಗೆ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ದಾಖಲಾತಿಯ ಬಗ್ಗೆ ಗೊತ್ತಿಲ್ಲದಿದ್ದರು 3 ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 134 ರಲ್ಲಿ 10 ಎಕರೆ ಜಮೀನು ಯಾವತ್ತೂ ಸೋಮಯ್ಯ ಬಿನ್ ಕರಿಯಪ್ಪ ರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ವಿಭಾಗದ ಮೂಲಕ ಬರಬೇಕಾಗಿದ್ದ ಆಸ್ತಿಯನ್ನು ತಪ್ಪಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 134 ರಲ್ಲಿ 10 ಎಕರೆ ಜಮೀನನ್ನು ನಾನು

ಯಾವತ್ತೂ ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ವೆ ನಂಬರ್ 134 ರಲ್ಲಿ 2 ಎಕರೆ 14 ಗುಂಟೆ ಜಮೀನನ್ನು ನಾನು ಖರೀದಿ ಮಾಡಿ ನನ್ನ ಹೆಸರಿಗೆ ಖಾತಾ ಬದಲಾವಣೆಯಾಗಿರುತ್ತದೆ ಎಂದು ನುಡಿಯುತ್ತಾರೆ. O.S.152/1998 ರಲ್ಲಿ ಹೇಳಿರುವ ಸೋಮಯ್ಯ ಬಿನ್ ಜೋಗಿ ದೇವಯ್ಯ ರವರಿಂದಲೇ ಸದರಿ 2 ಎಕರೆ 14 ಗುಂಟೆ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. 3ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಧಿಕಾರ ಪತ್ರದ ಮೂಲಕ ಕ್ರಯ ಪತ್ರ ಆಗಿದೆ ಎಂದು ಹೇಳಿದ ಅಧಿಕಾರ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ.4 ರಿಂದ 8 ಪಹಣಿ ಪತ್ರಗಳಿಗೂ ವಾದಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ